# ದಾನದ ಶಿಲಾಶಾಸನ

ಹಿರೇಸಿಂಗನಗುತ್ತಿ ಹಿಂದೆ ಬಾದಾಮಿ ಚಾಲುಕ್ಯ ಅರಸರ ಕಾಲದಲ್ಲಿ ಮಾಂಡಲೀಕನ ಅಧೀನದಲ್ಲಿತ್ತು. ಆ ಮಾಂಡಲೀಕನು ಊರ ಸುತ್ತಲೂ ಕಲ್ಲಿನ ಕೋಟೆ ಗೋಡೆಯನ್ನು ಹಾಗೂ ನಾಲ್ಕು ದಿಕ್ಕಿಗೆ ಒಂದೊಂದರಂತೆ ಹುಡೆ (50 ಅಡಿ) ಕಟ್ಟಿಸಿದ್ದನು. ಒಮ್ಮೆ ಊರಿನ ಯುವಕನೊಬ್ಬ ವೈರಿಗಳನ್ನು ಸೋಲಿಸಿ ಬಂದಿದ್ದಕ್ಕೆ ಮಾಂಡಲೀಕನು ಅವನಿಗೆ 50 ಎಕರೆ ಭೂಮಿಯನ್ನು ಕೊಟ್ಟು ಶಿಲಾಶಾಸನ (ದಾನಪತ್ರ) ಕೆತ್ತಿಸಿದನು. ಈ ಕಲ್ಲು ಊರಿನ ಹನುಮಂತ ದೇವರ ಗುಡಿಯ ಮುಂಭಾಗದಲ್ಲಿದೆ. ಮಾಂಡಲೀಕನು ಕೊಟ್ಟ ಭೂಮಿಯನ್ನು ಇಂದಿಗೂ ವೀರನ ಕಲ್ಲು ಹೊಲ ಎಂಬ ಹೆಸರಿನಿಂದ ಕರೆಯುತ್ತಾರೆ.

**-ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**





# ಹಳದಿ ಸುಂದರಿ!

ಇತಿಹಾಸ ಪ್ರಸಿದ್ಧ ಹಂಪೆಯ ಕಮಲ್ ಮಹಲ್‌ಗೆ ಹೋಗುವಾಗ ಹಳದಿ ಬಣ್ಣದ ಹೂಗಳಿಂದ ಮೈವೆತ್ತಿರುವ ಗಿಡವೊಂದು ನಿಮ್ಮನ್ನು ವಿಶೇಷವಾಗಿ ಆಕರ್ಷಿಸುತ್ತದೆ. ಅದುವೇ 'ಗೋಲ್ಡನ್ ರೇನ್ ಟ್ರೀ'. ಕೇಷಿಯಾ ಸಂಕುಲ, ಫ್ಯಾಬೇಷಿಯ ಕುಟುಂಬಕ್ಕೆ ಸೇರುವ ಈ ವೃಕ್ಷದ ಸಸ್ಯಶಾಸ್ತ್ರೀಯ ನಾಮಧೇಯ ಕೇಷಿಯಾ ಫಿಸ್ತುಲಾ. ಕನ್ನಡದಲ್ಲಿ ಕಕ್ಕೆ ಮರ ಎಂದು ಕರೆಯುತ್ತಾರೆ. ಉಷ್ಣವಲಯದಲ್ಲಿ ಸಮೃದ್ಧವಾಗಿ ಬೆಳೆಯುವ ಈ ಮರದ ವಿಶೇಷ ಎಂದರೆ ಎಲೆಗಳೇ ಇಲ್ಲದಂತೆ ಮರದ ಪೂರ್ತಿ ಹಳದಿ ಹೂಗಳನ್ನೇ ಯಥೇಚ್ಛವಾಗಿ ಪ್ರದರ್ಶಿಸುವುದು.

**ಚಿತ್ರ- ಬರಹ: ಹನುಮಂತ ಭಟ್ ಬಿ., ಬೆಂಗಳೂರು**

# ಮಾದಳ ಫಲ

ನೋಡಿದರೆ ಗಜಲಿಂಬೆ ತರಹ ಕಾಣುವ ಇದು ಮಾದಳ ಫಲ. ಸಿಪ್ಪೆ ತೆಗೆದರೆ ಚಕ್ಕೋತದಂತೆ ಇರುತ್ತದೆ. ಹನ್ನೆರಡು ಚಿಕ್ಕದಾದ ತೊಳೆಗಳು ಇರುತ್ತವೆ. ಚಿತ್ರಾನ್ನ, ಶರಭತ್, ಉಪ್ಪಿನಕಾಯಿ ಮಾಡಬಹುದು. ಸಿಟ್ರಸ್ ಜಾತಿಗೆ ಸೇರಿರುವ ಮಾದಳ ಫಲದ ಮೇಲಿನ ತೆಳು ಸಿಪ್ಪೆ ಹೆರೆದರೆ ಸಿಗುವ ಬಿಳಿ ಒಳ ಸಿಪ್ಪೆ ತಿಂದರೆ ಸಿಹಿ ಸಿಹಿ. ಈ ಕಾಯಿಯನ್ನು ತೂಗಿದರೆ ಒಬ್ಬೊಬ್ಬರಿ ಸಾವಿರದ ಮುನ್ನೂರು ಐವತ್ತು ಗ್ರಾಂ ಇತ್ತು. ರಕ್ತ ಮೂಲವ್ಯಾಧಿಗೆ, ಉರಿಮೂತ್ರಕ್ಕೆ ಇದು ಒಳ್ಳೆಯದು.

**-ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ**

